**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. ಸಂಖ್ಯೆ: 618/2023**

**ಪಿರ್ಯಾದಿ** ಃ ಎಸ್.ಎಂ.ಸೈಯದ್,
ಬಿನ್ ಸುಲೇಮಾನ್,
ವಯಸ್ಸು ಸುಮಾರು 32 ವರ್ಷ,
ವಾಸಃ ಇಂದಿರಾನಗರ, ಬಿಳಗೊಳ
ಗ್ರಾಮ ಮತ್ತು ಅಂಚೆ, ಕಸಬಾ
ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ವಿರುದ್ಧ**

**ಆರೋಪಿ** ಃ ಶಂಕರೇಗೌಡ
ಬಿನ್ ನಾರಾಯಣಗೌಡ,
ವಯಸ್ಸು ಸುಮಾರು 40 ವರ್ಷ,
ವಾಸಃ ಶಿವಾಜಿನಗರ, ಬಿಳಗೊಳ
ಗ್ರಾಮ ಮತ್ತು ಅಂಚೆ, ಕಸಬಾ
ಹೋಬಳಿ, ಮೂಡಿಗೆರೆ ತಾಲ್ಲೂಕು,

## ಆಪಾದನೆಯ ಸಾರಾಂಶ

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ನಿಮ್ಮ ಕುಟುಂಬದ ತುರ್ತು ಹಣದ ಅವಶ್ಯಕತೆಗಳಿಗೋಸ್ಕರ ಫಿರ್ಯಾದಿಯನ್ನು ಸಂಪರ್ಕಿಸಿ, ರೂ.4,20,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡಾ, ಬಿಳಗೊಳ ಶಾಖೆಯ ಚೆಕ್ ಸಂಖ್ಯೆ003865, ದಿನಾಂಕ 10.11.2022, ರೂ.4,20,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಬ್ಯಾಂಕಿನಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ

ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ (Funds insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 21.11.2022 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ದಿನಾಂಕ 23.01.2024 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

Sd/-

ಮೂಡಿಗೆರೆ
ದಿನಾಂಕಃ 23.01.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.

Complainant absent. Accused present.

Substance of accusation for the offence punishable under section 138 of N.I Act is framed and read over to the accused in the Kannada language known to him. Accused having understood the same, denied and claimed to be tried.

Sri.SD Adv., files memo stating that sworn statement evidence of the PW1 may be treated as his examination in chief evidence.

Perused order sheet and materials on record. It is evident that the complainant has been examined as PW1 on 17.05.2023 and got marked at Ex.P1 to 5 on his behalf while adducing sworn statement. In view of the memo, the said evidence treated as examination in chief evidence of complainant.

Sri.MMR Adv., files application under section 145(2) of N.I Act. Heard, same is allowed and accused is permitted to cross examine the PW1. Accordingly case is posted for cross examination of PW1 by:29.02.2024.

**P.C.J and JMFC., Mudigere**